quickmarketreports.com

Date : 20-10-2015

# ಸಕ್ಕರೆ ಕ್ಯಾರಿ ಓವರ್ ದಾಸ್ತಾನು 9.6 ಮಿಲಿಯನ್ ಟನ್‌ಗಳಿಗೆ ಹೆಚ್ಚಳ, ಮಿಲ್‌ಗಳು ರಫ್ತು ಗುರಿ ತಲುಪಲು ಹೆಣಗಾಟ

9.6 ಮಿಲಿಯನ್ ಕ್ಯಾರಿ ಓವರ್ ದಾಸ್ತಾನಿನೊಂದಿಗೆ ಹೊಸ ಸಕ್ಕರೆ ಉತ್ಪಾದನಾ ಸೀಜನ್ ಪ್ರಾರಂಭವಾಗಿದ್ದು, ಹಿಂದಿನ ವರ್ಷ 7.5 ಮಿಲಿಯನ್ ಟನ್ ಕ್ಯಾರಿ ಓವರ್ ದಾಸ್ತಾನಿತ್ತು ಎಂದು ಇಸ್ಮಾ ಅಂದಾಜಿಸಿದೆ. ಹೊಸ ಸಕ್ಕರೆ ಉತ್ಪಾದನೆ ಆರಂಭಿಸಲು ಮಿಲ್‌ಗಳಿಗೆ ಹಣದ ಅವಶ್ಯಕತೆ ಇರುವುದರಿಂದ ದರದ ಬಗ್ಗೆ ರಾಜಿಯಾಗಲು ತಯಾರಿದ್ದು, ಕಚ್ಛಾ ಸಕ್ಕರೆ ಸಬ್ಸಿಡಿ ಮುಂದಿನ ತಿಂಗಳು ಚುನಾವಣೆ ಪೂರ್ಣವಾಗುವ ವರೆಗೆ ಅಂಗೀಕಾರಗೊಳ್ಳುವ ನಿರೀಕ್ಷೆ ಇಲ್ಲದಿರುವುದರಿಂದ ಮಿಲ್‌ಗಳು ಬಿಳಿ ಸಕ್ಕರೆ ರಫ್ತು ಮಾಡಲು ತೊಡಗುತ್ತಿದ್ದಾರೆ. ನಷ್ಟದಲ್ಲಿ ಉತ್ಪಾದಿಸುತ್ತಾ, ಮಿಲ್‌ಗಳು ಏಶ್ಯಾದ ರಾಷ್ಟ್ರಗಳಾದ ಅಪಘಾನಿಸ್ತಾನಾ, ಮ್ಯಾನ್ಮಾರ್, ಶ್ರೀಲಂಕಾಗಳಿಗೆ ಸುಮಾರು 90 ಸಾವಿರ ಟನ್ ಸಕ್ಕರೆ ರಫ್ತು ಮಾಡಲು ತಯಾರಿಯಲ್ಲಿದ್ದಾರೆನ್ನಲಾಗಿದೆ. ಇದಕ್ಕೆ ಟನ್‌ಗೆ 390ರಿಂದ 410ಡಾಲರ್ ಎಫ್‌ಓಟಿ ದರ ಸಿಗಲಿದೆಯೆನ್ನಲಾಗಿದ್ದು ಭಾರತೀಯ ಮಾರುಕಟ್ಟೆಯಲ್ಲಿ ಟನ್‌ಗೆ ರೂ.25000/– ($385) ಇದ್ದು ಸಾಮಾನ್ಯ ಇದೇ ದರ ರಫ್ತು ಸಕ್ಕರೆಗೂ ಇದೆ. ಮಿಲ್‌ಗಳು ರಫ್ತು ಮಾಡುತ್ತಿದ್ದರೂ 4 ಮಿಲಿಯನ್ ಟನ್ ಗುರಿಯನ್ನು ತಲುಪಲು ಕಷ್ಟಪಡಬೇಕಿದೆ ಎನ್ನಲಾಗಿದೆ.